# ✳ ಸ್ವಾಮಿ ಶಿವಾನಂದರ ನೆನಪುಗಳು-೩ ✳

**ಸ್ವಾಮಿ ಅಶೋಕಾನಂದ**

**(ಹಿಂದಿನ ಸಂಚಿಕೆಯಿಂದ ಮುಂದುವರಿದುದು)**

ನಾನು ಭಾರತದಿಂದ ಹೊರಡಬೇಕಾದ ದಿನ, ಪ್ರಯಾಣದ ಟಿಕೇಟು ತೆಗೆದುಕೊಂಡ ಬಳಿಕ, ನನಗಾಗಿ ವಿಶೇಷವಾಗಿ ಸಮಯ ನೀಡಬೇಕೆಂದು ಸ್ವಾಮಿ ಶಿವಾನಂದರಲ್ಲಿ ಕೇಳಿಕೊಂಡೆ. ಸಾಮಾನ್ಯವಾಗಿ ಭಾರತದಲ್ಲಿ ಹೀಗೆ (ಏಕಾಂತದಲ್ಲಿ ಮಾತನಾಡಲು) ಯಾರೂ ಒತ್ತಾಯಿಸುವುದಿಲ್ಲ. ಸ್ವಾಮಿಗಳೊಂದಿಗೆ ಮಾತನಾಡುವಾಗ ಮತ್ತಾರೂ ಅಲ್ಲಿಗೆ ಬರದೇ ಇರುವುದು ಕೇವಲ ಒಂದು ಆಕಸ್ಮಿಕ ಅಷ್ಟೆ. ಯಾವಾಗಲೂ ಯಾರಾದರೂ ಅವರ ಬಳಿ ಬಂದು ಹೋಗುತ್ತಿರುತ್ತಾರೆ. ನಾನು ಕೆಲವು ವೈಯಕ್ತಿಕ ಪ್ರಶ್ನೆಗಳನ್ನು ಕೇಳುವ ಸಲುವಾಗಿ ಅವರೊಂದಿಗೆ ಪ್ರತ್ಯೇಕವಾಗಿ ಮಾತನಾಡಬೇಕಿತ್ತು. "ಖಂಡಿತವಾಗಿ ಆಗಲಿ," ಎಂದು ಹೇಳಿ ಅವರು ನಿರ್ದಿಷ್ಟವಾದ ಸಮಯವನ್ನು ಗೊತ್ತುಮಾಡಿದರು. ನಾನು ಆ ಸಮಯಕ್ಕೆ ಅವರ ಬಳಿ ಹೋದೆ. ಅದು ಮಧ್ಯಾಹ್ನದ ಮೊದಲ ಭಾಗ—ಯಾರಿಂದಲೂ ತೊಂದರೆಯಾಗದಂತೆ ಅವರು ನನ್ನನ್ನು ಒಳ ಕೊಠಡಿಗೆ ಕರೆದುಕೊಂಡು ಹೋದರು. ನನ್ನ ಪ್ರಶ್ನೆಗಳಿಗೆ ಉತ್ತರವಿತ್ತು, ಬಳಿಕ ನನ್ನ ಮೇಲೆ ತಮ್ಮ ಆಶೀರ್ವಾದವನ್ನು ವರ್ಷಿಸಿದರು. ಅದು ತುಂಬಿ ಹರಿಯುತ್ತಿತ್ತು! ಆಗ ಅವರು ಭಗವದ್ಗೀತೆಯ ಒಂದು ಶ್ಲೋಕವನ್ನು ನೆನಪಿಸಿಕೊಳ್ಳಲು ಯತ್ನಿಸಿದರು. ನೆನಪಾಗದೆ "ಗೀತೆಯನ್ನು ತೆಗೆದುಕೊಂಡು ಬಾ" ಎಂದು ಹೇಳಿದರು. ಪುಸ್ತಕದ ಬೀರುವೊಂದರಿಂದ ಪ್ರತಿಯೊಂದನ್ನು ತಂದುಕೊಟ್ಟೆ. ಅವರಿಗೆ ಬೇಕಾಗಿದ್ದ ಶ್ಲೋಕವನ್ನು ಕಂಡುಹಿಡಿದರು. ಅದು ಯಾವುದೆಂದು ನಾನು ನಿಮಗೆ ಹೇಳುವುದಿಲ್ಲ. ಅವರು ಅದನ್ನು ನನಗೆ ಓದಿ ಹೇಳಿ "ಇದು ನಿನ್ನ ಸ್ಥಿತಿಯನ್ನು ವಿವರಿಸುತ್ತದೆ," ಎಂದರು. ಅವರು ಆ ರೀತಿಯಾಗಿ ಹೇಳಿದ್ದು ನನಗೆ ಒಂದು ಅದ್ಭುತವಾದ ವಿಷಯವಾಗಿ ಕಂಡಿತು.

ಅವರು ನನಗೆ ಹೇಳಿದ ಕೊನೆಯ ಮಾತುಗಳನ್ನು ತಿಳಿಸಿದ್ದೇನೆ. ಅವರ ಕರುಣೆ ಅಲ್ಲಿಗೇ ಕೊನೆಗೊಳ್ಳಲಿಲ್ಲ. ನಾನು ಈ ದೇಶಕ್ಕೆ (ಅಮೆರಿಕ) ಬಂದ ಮೇಲೂ ಅವರು ನನಗೆ ಅನೇಕ ಪತ್ರಗಳನ್ನು ಬರೆದರು. ವಾಸ್ತವವಾಗಿ, ಅವರ ಆಶೀರ್ವಾದದಿಂದಲೇ ಈ ಕೇಂದ್ರದ ಕೆಲಸ ಕಾರ್ಯಗಳು ನಡೆಯುತ್ತಿವೆ. ನಿಮ್ಮಲ್ಲಿ ಕೆಲವರಿಗೆ ನೆನಪಿರುವಂತೆ, ನಾನು ಇಲ್ಲಿಗೆ ಬಂದಾಗ ಸ್ವಾಮಿ ವಿವಿದಿಶಾನಂದರು ಇಲ್ಲಿನ ಮುಖ್ಯಸ್ಥರಾಗಿದ್ದರು. ಶಾಂತಿ ಆಶ್ರಮಕ್ಕಿಂತ ನಗರಕ್ಕೆ ಹತ್ತಿರವಿರುವ, ಹೋಗಿಬರಲು ಅನುಕೂಲವಾಗಿರುವ ಆಧ್ಯಾತ್ಮಿಕ ಶಿಬಿರದ ಸ್ಥಳ ಬೇಕೆಂದು ನಮಗೆ ಅನ್ನಿಸಿತ್ತು. ಸ್ವಾಮಿ ವಿವಿದಿಶಾನಂದರು, ತಮ್ಮ ಆ ಯೋಜನೆಗೆ ಸ್ವಾಮಿ ಶಿವಾನಂದರ ಒಪ್ಪಿಗೆ ಕೇಳಿ ಬರೆದರು. ಅವರು ಅದಕ್ಕೆ ತಕ್ಷಣ ಸಮ್ಮತಿಸಿದರು. ಅದಾಗಿ ಬಹುಕಾಲದ ನಂತರವೇ ಈ ಸೊಸೈಟಿಯು ಒಲೆಮಾದಲ್ಲಿರುವ ಆಧ್ಯಾತ್ಮಿಕ ಶಿಬಿರದ ಕೇಂದ್ರಕ್ಕೆ ಸ್ಥಳ ಕೊಳ್ಳಲು ಸಾಧ್ಯವಾಯಿತು. ಅದಕ್ಕೆ ಸ್ವಾಮಿ ಶಿವಾನಂದರ ಅನುಮತಿಯ ಬೆಂಬಲ ವಿದೆಯೆಂಬುದು ನನಗೆ ಗೊತ್ತಿತ್ತು.



ಸ್ವಾಮಿ ಅಶೋಕಾನಂದ

ಸ್ಯಾನ್ ಫ್ರಾನ್ಸಿಸ್ಕೋದ ನೂತನ ದೇವಾಲಯದ ಕಟ್ಟಡದ ಮೇಲೂ ಅವರ ಸಮ್ಮತಿ ಮತ್ತು ಆಶೀರ್ವಾದವಿದೆ. ನಾನು ಇಲ್ಲಿಗೆ ಬಂದ ನಂತರ, ತಿಂಗಳುಗಳು ಕಳೆದಂತೆ, ನಮಗೆಲ್ಲ ಒಂದು ಹೊಸ ದೇವಸ್ಥಾನ ಬೇಕೆಂಬುದು ಸ್ಪಷ್ಟವಾಯಿತು. ಹಳೆಯ ದೇವಸ್ಥಾನದ ಕಟ್ಟಡ ಬಹಳ ಶಿಥಿಲವಾಗಿತ್ತು; ಅದು ಈಗಲೂ ಹಾಗೆಯೇ ಇದೆ. ಅಷ್ಟೇನೂ ಶಿಥಿಲವಾಗಿದ್ದಂತೆ

ಕಾಣದೆ ಹೋದರೂ ರಿಪೇರಿ ಮಾಡಲು ಸಾಧ್ಯವಾಗದಷ್ಟು ಅಲ್ಲಲ್ಲಿ ಕುಸಿಯುತ್ತಿದೆ. ಆದುದರಿಂದ, ಸ್ವಾಮಿ ಶಿವಾನಂದರ ಜೀವಿತ ಕಾಲದಲ್ಲೇ ಮತ್ತೊಂದು ದೇವಸ್ಥಾನ ಬೇಕಾಗಬಹುದಾದ ಕಾಲ ಬರುವುದೆಂದು ತಿಳಿದು, ನನ್ನ ಭಾವನೆಗಳನ್ನು ತಿಳಿಸಿ ಅವರಿಗೆ ಪತ್ರ ಬರೆದೆ. "ನಮಗೆ ಇನ್ನೊಂದು ದೇವಸ್ಥಾನ ಆವಶ್ಯಕವೇ? ಸ್ವಾಮಿ ತ್ರಿಗುಣಾತೀತರಿಂದ ನಿರ್ಮಾಣವಾದ ಈ ದೇವಸ್ಥಾನವನ್ನು ತ್ಯಜಿಸುವುದೇ? ಅವರು ಈ ಮಂದಿರವನ್ನು ನಿರ್ಮಿಸಿ ಅದ್ಭುತವೂ, ಶಕ್ತಿಯುತವೂ ಆದ ಆಧ್ಯಾತ್ಮಿಕ ವಾತಾವರಣವನ್ನು ಸೃಷ್ಟಿಸಿದ್ದಾರೆ. ನಾವು ನಮ್ಮ ಕಾರ್ಯಕ್ರಮಗಳನ್ನು ಹೊಸ ದೇವಸ್ಥಾನಕ್ಕೆ ವರ್ಗಾಯಿಸಿದರೆ, ಇದನ್ನು ತ್ಯಜಿಸಿದಂತೆ ಆಗುವುದು. ಹಾಗೆ ಮಾಡುವುದೆ?" ಇವೆಲ್ಲ ಪ್ರಶ್ನೆಗಳನ್ನು ನಾನು ಅವರಲ್ಲಿ ಕೇಳಿದೆ. ಅವರು ಬರೆದ ಉತ್ತರದ ಅನುವಾದವನ್ನು ನಾನಿಲ್ಲಿ ಸಂಪೂರ್ಣವಾಗಿ ನೀಡುತ್ತೇನೆ:



ಸ್ಯಾನ್ ಫ್ರ್ಯಾನ್ಸಿಸ್ಕೋದ ಹಳೆಯ ದೇವಾಲಯ

೨೬ ಜನವರಿ ೧೯೩೩

ಶ್ರೀಮಾನ್ ಅಶೋಕಾನಂದ,

ನಿನ್ನ ಅಕ್ಟೋಬರ್ ಮತ್ತು ನವೆಂಬರ್ ೩೦ರ ಎರಡು ಪತ್ರಗಳೂ ನನಗೆ ತಲುಪಿವೆ. ನಿನ್ನ ಕೆಲಸ ಕಾರ್ಯಗಳ ಬಗ್ಗೆ ಓದಿ ತಿಳಿದು ಶ್ರೀರಾಮಕೃಷ್ಣ ಮತ್ತು ಸ್ವಾಮಿಜಿಯವರ ಮೇಲೆ ನಿನಗಿರುವ ಗಾಢವಾದ ಭರವಸೆಯನ್ನು ಕಂಡು ನನಗೆ ಬಹಳ ಆನಂದವಾಗಿದೆ. ನಿನ್ನ ಉಪನ್ಯಾಸಗಳು ಆ ಊರಿನಲ್ಲಿ ಯಶಸ್ವಿಯಾಗಿರುವುದನ್ನು ತಿಳಿದು ನನಗೆ ತುಂಬ ಸಂತೋಷವಾಗಿದೆ. ಶ್ರೋತೃಗಳಲ್ಲಿ ಕೆಲವರು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯಲು ಇದರಿಂದ ಸುಳಿವು ಪಡೆಯಲು ಸಾಧ್ಯವಾಗುವಂತಾದರೆ ನಿನ್ನ ಶ್ರಮವೆಲ್ಲ ಸಾರ್ಥಕವಾಗುವುದು. ನಿನ್ನ ಬಳಿಗೆ ಬರುವವರಿಗೆ ಶಾಂತಿಯ ಮಾರ್ಗವನ್ನು ತೋರಿಸಲು ಗುರು ಮಹಾರಾಜರು ನಿನ್ನನ್ನು ಉಪಕರಣವನ್ನಾಗಿ ಮಾಡಲಿ ಎಂದು ನಾನು ಸದಾ ಪ್ರಾರ್ಥಿಸುತ್ತೇನೆ.

ಆ ಪ್ರದೇಶಗಳಿಂದ ನನಗೆ ಬರುವ ಪತ್ರಗಳೆಲ್ಲವೂ ನಿನ್ನನ್ನು ಬಹುವಾಗಿ ಪ್ರಶಂಸಿಸುವಂಥವು ಮತ್ತು ನೀನು ಕಳುಹಿಸಿರುವ ಕರಪತ್ರದಿಂದ ನೀನು ಯಾವ ಕಾರ್ಯಗಳನ್ನು ಮಾಡುತ್ತಿರುವೆ ಎಂಬುದನ್ನು ನೋಡಿ ತಿಳಿದಿರುವೆನು. ನಾನು ಆ ಕರಪತ್ರವನ್ನು ವಿಶದವಾಗಿ ಓದಿದೆ. ಬಹಳ ಚೆನ್ನಾಗಿ ಮೂಡಿ ಬಂದಿದೆ. ಗುರುಮಹಾರಾಜರು ಮತ್ತು ಸ್ವಾಮಿಜಿಯವರ ಬಗೆಗೆ ನಿನ್ನಲ್ಲಿರುವ ಶ್ರದ್ಧೆ ಮತ್ತು ನಂಬಿಕೆಗಳೇ ಈ ಯಶಸ್ಸಿನ ಮೂಲದಲ್ಲಿರುವುದು. ನೀನು ಅದನ್ನು ಎಂದಿಗೂ ಮರೆಯಬೇಡ. ನೀನು ಎಂದಿಗೂ ಅವರ ಸೇವಕನಾಗಿರುವಂತೆ ಮತ್ತು ಎಲ್ಲ ಕೆಲಸವನ್ನೂ ಗುರುಮಹಾರಾಜರಿಗೆ ಮಾಡುವ ಸೇವೆಯೆಂಬ ಭಾವದಿಂದ ನೀನು ನಿರ್ವಹಿಸಿಕೊಂಡು ಹೋಗುವಂತೆ ಸದಾ ಪ್ರಾರ್ಥಿಸು.

ಭಗವಂತನು ನಿನ್ನನ್ನು ತನ್ನ ಸಾಧನವನ್ನಾಗಿಸಿಕೊಂಡು ತನ್ನದೇ ಆದ ಸಂದೇಶವನ್ನು ಅನೇಕ ಜನರಲ್ಲಿ ಹರಡುತ್ತಿರುವನು. ಅದಕ್ಕಾಗಿ ನಿನ್ನನ್ನು ನೀನು ಧನ್ಯನೆಂದು ಭಾವಿಸು ಮತ್ತು ಎಂದಿಗೂ ಮತ್ತಾವ ಆಲೋಚನೆಯೂ ನಿನ್ನ ಮನಸ್ಸನ್ನು ಪ್ರವೇಶಿಸದಂತೆ ಅವನು ನೋಡಿಕೊಳ್ಳಲಿ. ಅವನನ್ನು ಸದಾ ಸ್ಮರಿಸು ಮತ್ತು ಚಿಂತಿಸು. ಭಯಬೇಡ! ಹೆದರದಿರು! ನೀನು ಭಗವಂತನನ್ನು ಆಶ್ರಯಿಸಿದರೆ, ಅವನು ನಿನ್ನನ್ನು ಕಾಪಾಡುತ್ತಿರುವುದನ್ನು ನೀನೇ ನೋಡುವೆ. ಹೆಸರು ಮತ್ತು ಕೀರ್ತಿಗಳೆಂಬ ಬೆಂಕಿಯ ಮಧ್ಯದಲ್ಲಿಯೂ ಕೂಡ ಅವನು ನಿನ್ನನ್ನು ಯಾವಾಗಲೂ ರಕ್ಷಿಸುವನು. ನೀನು ಎಲ್ಲ ಅಹಂಕಾರಗಳಿಂದಲೂ ಮುಕ್ತನಾಗಿ, ಅವನ ಕೆಲಸವನ್ನು ಮಾಡಿದ ಮೇಲೆ ಧನ್ಯತಾಭಾವವುಳ್ಳವನಾಗು, ಎಂದು ನಾನು ಆಶೀರ್ವದಿಸುತ್ತೇನೆ.

ಆ ಊರಿನಲ್ಲಿ ಒಂದು ಒಳ್ಳೆಯ ಸ್ಥಳಕ್ಕೆ ದೇವಸ್ಥಾನವನ್ನು ವರ್ಗಾಯಿಸಲು ನಿನಗೆ ನನ್ನ ಸಂಪೂರ್ಣ ಸಮ್ಮತಿಯನ್ನು ನೀಡುತ್ತೇನೆ. ಅದರ ಆವಶ್ಯಕತೆಯನ್ನು ಸ್ವಾಮಿ ತ್ರಿಗುಣಾತೀತರು ಸಮ್ಮತಿಸಲೇಬೇಕು. ಆ ದೇವಸ್ಥಾನವನ್ನು ಸ್ಥಾಪಿಸಿದಾಗ ನಿಸ್ಸಂದೇಹವಾಗಿ ಸ್ವಾಮಿಗಳು ಅದರ ಏಳಿಗೆಯನ್ನು ಬಯಸಿದ್ದರು. ಈ ಕೆಲಸ ಮುಂದುವರಿಯದೆ ಇದ್ದಲ್ಲಿಯೇ ಇರಬೇಕೆಂದು ಅವರೇಕೆ ಯೋಚಿಸಬೇಕು? ಅವರ ಕಾಲದಲ್ಲಿ ಯಾವುದು ಒಳ್ಳೆಯದು, ಉಚಿತವೆಂದು ಅವರು ಭಾವಿಸಿ

ವರೋ ಅವನ್ನು ಮಾಡಿದರು. ಆ ಸ್ಥಳದಲ್ಲಿ ಬಹಳ ದಿನಗಳ ಕಾಲ ಅವರ ಕೆಲಸ ನಡೆದಿದೆ. ಈಗ ಸ್ಥಳಾವಕಾಶ ಸಾಲದಾಗಿರುವುದರಿಂದ ಅವರೇ ದೇವಸ್ಥಾನವನ್ನು ಮತ್ತೊಂದು ಕಡೆಗೆ ವರ್ಗಾಯಿಸುತ್ತಿದ್ದರು, ಮತ್ತು ನೀನು ಇದನ್ನು ಸಾಧಿಸಿದರೆ ನಿನ್ನ ಪ್ರಯತ್ನಕ್ಕೆ ಮೊಟ್ಟಮೊದಲ ಆಶೀರ್ವಾದ ಅವರಿಂದಲೇ ಬರುವುದು. ಅವರು ಸಂತೋಷಪಡುವರು.



ಸ್ವಾಮಿ ಅಶೋಕಾನಂದರು ಕಟ್ಟಿಸಿದ ಸ್ಯಾನ್ ಫ್ರ್ಯಾನ್ಸಿಸ್ಕೋದ ನೂತನ ದೇವಾಲಯ

ಇನ್ನು ನೀನು ತಿಳಿಸಿರುವ ವಿಷಯದ ಬಗ್ಗೆ, ಅದೂ ಕೂಡ ನೂತನ ದೇವಾಲಯಕ್ಕೆ ಪಸರಿಸುವುದು. ಶ್ರೀರಾಮಕೃಷ್ಣರ ದಿವ್ಯ ಸಾನ್ನಿಧ್ಯ ಹೊಸ ದೇವಸ್ಥಾನವನ್ನು ವ್ಯಾಪಿಸುವುದು; ಈ ಹೊರಗಿನ ವಸ್ತುಗಳೆಲ್ಲ ಕೇವಲ ಬಹಿರಂಗ. ನಿನ್ನ ಮನಸ್ಸಿನಲ್ಲಿ ಸಂದೇಹಗಳಿನ್ನೂ ಇದ್ದರೆ, ನಾನು ಹೇಳುತ್ತೇನೆ, ಶ್ರೀರಾಮಕೃಷ್ಣರ ಕೃಪೆಯಿಂದ ನೀನು ದೇವಸ್ಥಾನವನ್ನು ಎಲ್ಲಿಗೆ ಸ್ಥಳಾಂತರಗೊಳಿಸಿದರೂ, ಅಲ್ಲಿ ಶ್ರೀರಾಮಕೃಷ್ಣರ ದಿವ್ಯಶಕ್ತಿಯ ಪ್ರವಾಹ ಯಾವುದೇ ರೀತಿಯಲ್ಲಿ ಕುಂಠಿತವಾಗುವುದಿಲ್ಲ ಅಥವಾ ಕಡಿಮೆಯಾಗುವುದಿಲ್ಲ. ಅಷ್ಟೇ ಅಲ್ಲ, ಅದು ದಿನದಿನಕ್ಕೆ ಅಭಿವೃದ್ಧಿಗೊಂಡು ಹೆಚ್ಚು ಹೆಚ್ಚು ಜನರ ಹೃದಯ ಮತ್ತು ಮನಸ್ಸುಗಳನ್ನು ಆಕರ್ಷಿಸುವುದು. ನಿನ್ನ ಮನಸ್ಸಿಗೆ ತೃಪ್ತಿಯಾಗುವಂತಹ ಸ್ಥಳವನ್ನು ಆರಿಸಿ ನಿನ್ನ ಇಚ್ಛೆಯಂತೆ ದೇವಸ್ಥಾನವನ್ನು ನಿರ್ಮಿಸು.

ಬಡವರು ಮತ್ತು ಬಲ್ಲಿದರು ಎಲ್ಲರೂ ಅವರಿಗೆ ಸಮಾನರಾಗಿದ್ದರು, ನಿನಗೂ ಎಲ್ಲರೂ ಸಮಾನರು. ಈ ಕ್ಷಣದಲ್ಲೇ ಆಗಲಿ, ಭವಿಷ್ಯದಲ್ಲೇ ಆಗಲಿ, ಯಾರಿಂದಲೂ ಏನನ್ನೂ ನಿರೀಕ್ಷಿಸಬೇಡ. ನೀನು ಏನನ್ನಾದರೂ ಕೇಳಬೇಕಾಗಿದ್ದರೆ, ಶ್ರೀರಾಮಕೃಷ್ಣರನ್ನು ಕೇಳು. ನೀವೆಲ್ಲ ಯತಿಚಕ್ರವರ್ತಿಯ ಮಕ್ಕಳು. ನಿಮಗೆ ಬೇರೆ ಯಾರು ತಾನೆ ಏನನ್ನು ಕೊಡಬಲ್ಲರು? ಅವರು ಬಂದು ನಿಮ್ಮಿಂದ ನಿಧಿ, ಐಶ್ವರ್ಯಗಳನ್ನು ತೆಗೆದುಕೊಳ್ಳುವರು. ಹಾಗೆ ಪಡೆದಾಗ ಯಾವುದನ್ನು ಸಮೃದ್ಧಿ ಎಂದು ಭಾವಿಸಿದ್ದೇವೋ ಅದು ತುಚ್ಛವೆಂಬುದನ್ನು ತಿಳಿದು ಅವರು ಅದನ್ನು ಬಿಸಾಡುವರು.

ಅವನ ಕೃಪೆಯಿಂದ ನನ್ನ ಆರೋಗ್ಯ ಹೇಗೊ ಸುಮಾರಾಗಿ ಸಾಗುತ್ತಿದೆ. ಆದರೆ ನಿನ್ನ ಅಲ್ಸರ್ (ಕರುಳು ಹುಣ್ಣು) ಇನ್ನೂ ಗುಣವಾಗಿಲ್ಲವೆಂಬ ಆತಂಕ ನನಗಿದೆ. ಯಾವುದೇ ವಿಷಯದಲ್ಲಿ ಉದಾಸೀನದಿಂದಿರಬೇಡ. ಸರಿಯಾದ ಉಪಚಾರ ಹಾಗೂ ಅವಶ್ಯವಾದಷ್ಟು ವಿಶ್ರಾಂತಿಯನ್ನು ತೆಗೆದುಕೊ. ನಂತರ ಏನು ಆಗಬೇಕೊ ಅದು ಆಗುವುದು. ಇದು ಶ್ರೀರಾಮಕೃಷ್ಣರ ಮತ್ತು ನಮ್ಮಗಳ ಆದೇಶ. ಆದುದರಿಂದ ನೀನು ಸರಿಯಾದ ಚಿಕಿತ್ಸೆಯನ್ನು ಪಡೆದು, ಉತ್ತಮ ಶುಶ್ರೂಷೆಯಿಂದ ನಿನ್ನ ಆರೋಗ್ಯದ ಕಡೆ ಸರಿಯಾದ ಗಮನವಿತ್ತಿರುವೆಯೋ ಇಲ್ಲವೋ ಎಂಬುದನ್ನು ನನಗೆ ತಿಳಿಸಬೇಕು. ಅದರಿಂದ ನನಗೆ ಸಂತೋಷವಾಗುವುದು. ಖೋಕಾ ಮಹಾರಾಜರು (ಸ್ವಾಮಿ ಸುಬೋಧಾನಂದ) ಕಾಲವಾದ ಬಳಿಕ ನನ್ನ ಮನಸ್ಸು ಕೆಲವು ದಿನಗಳ ಕಾಲ ಭಾರವಾಗಿತ್ತು. ಆದರೆ ಭಗವಂತನು ಅದನ್ನು ಈಗ ಹಗುರ ಮಾಡಿರುವನು. ಈಗ ಬೇಲೂರಿನಲ್ಲಿ ಎಲ್ಲರೂ ಆರೋಗ್ಯವಾಗಿದ್ದಾರೆ. ಶುದ್ಧಾನಂದ, ನಿರ್ಮಲ್ (ಸ್ವಾಮಿ ಮಾಧವಾನಂದ) ಮತ್ತು ಇತರರೂ ಚೆನ್ನಾಗಿದ್ದಾರೆ. ಮಿಸ್ ಮ್ಯಾಕ್ಲಿಯಾಡ್ ಈಗ ಇಲ್ಲಿರುವರು. ಹಿಂತಿರುಗುವಾಗ ಅವರು ಪೆಸಿಫಿಕ್ ಸಾಗರದ ಮಾರ್ಗವಾಗಿ ಹೋಗುವರು ಮತ್ತು ಕ್ಯಾಲಿಫೋರ್ನಿಯಾದ ಆಶ್ರಮಗಳಿಗೆ ಭೇಟಿ ನೀಡುವರು. ಸ್ವಾಮಿಜಿಯ ಕೆಲಸ ಯಾವ ರೀತಿಯಲ್ಲಿ ಅಭಿವೃದ್ಧಿಗೊಂಡಿದೆ ಎಂಬುದನ್ನು ನೋಡುವ ಇಚ್ಛೆ ಆಕೆಗೆ. (ಸ್ವಾಮಿ) ಪರಮಾನಂದ ಬರುತ್ತಿರುವನು. ಫೆಬ್ರವರಿ ಎರಡನೆಯ ತಾರೀಖಿನಂದು ಬೇಲೂರನ್ನು ತಲಪುವನು. ನಾಲ್ಕು ಜನ ಭಕ್ತರನ್ನು ತನ್ನೊಡನೆ ಕರೆದುಕೊಂಡು ಬರುತ್ತಿರುವನು. ಇಲ್ಲಿ ಸ್ವಾಮಿಜಿಯ (ವಿವೇಕಾನಂದರ) ಜನ್ಮೋತ್ಸವವನ್ನು ಆಚರಿಸಲಾಯಿತು. ನಾಳೆಯ ದಿವಸ ರಾಜಾ ಮಹಾರಾಜರ (ಸ್ವಾಮಿ ಬ್ರಹ್ಮಾನಂದ) ಜನ್ಮೋತ್ಸವ. ನಿನ್ನ ಯೋಗಕ್ಷೇಮವನ್ನು ನೋಡಿಕೊಳ್ಳಿ ಎಂದು ನಾನು ಅವರಲ್ಲಿ ಪ್ರಾರ್ಥಿಸುತ್ತೇನೆ. ನನ್ನ ಆಶೀರ್ವಾದ ಮತ್ತು ಶುಭಾಶಯಗಳು ನಿನ್ನೊಂದಿಗಿರುವುವು ಎಂದು ನಿನಗೆ ತಿಳಿದೇ ಇದೆ. ಅಲ್ಲಿಯವರಿಗೆಲ್ಲ

ನನ್ನ ಆಶೀರ್ವಾದ ಮತ್ತು ಶುಭಾಶಯಗಳನ್ನು ನೀಡಿ ನನ್ನನ್ನು ಸಂತೋಷಗೊಳಿಸು.

ಕೆಲವು ವೇಳೆ ನಾನು ಪತ್ರ ಬರೆಯುವುದು ತಡವಾಗುವುದು; ನೀನು ಬೇಸರ ಮಾಡಿಕೊಳ್ಳುವುದಿಲ್ಲ ಎಂದೂ ಮತ್ತು ನಿಶ್ಚಿತವಾಗಿ ನಾನು ನಿನ್ನನ್ನು ಯಾವಾಗಲೂ ಆಶೀರ್ವದಿಸುತ್ತಿರುವೆ ಎಂಬುದನ್ನು ನೀನು ತಿಳಿದಿರುವೆ ಎಂದೂ ಭಾವಿಸುತ್ತೇನೆ.

**—ಶಿವಾನಂದ**

ಸ್ವಾಮಿ ಶಿವಾನಂದರಿಂದ ಬಂದ ಆ ಪತ್ರವು ನಿಶ್ಚಯವಾಗಿ ನನಗೆ ಒಂದು ಅದ್ಭುತ ಆಶೀರ್ವಾದವೇ ಆಗಿತ್ತು. ನಾನು ಅದನ್ನು ಜೋಪಾನವಾಗಿ ಇರಿಸಿಕೊಂಡೆ. ಹೊಸ ದೇವಸ್ಥಾನವನ್ನು ಕಟ್ಟುವ ಅವಕಾಶ ಒದಗಿದಾಗ ಸ್ವಾಮಿಗಳ ಭರವಸೆಯ ನುಡಿ ಒಂದು ದೊಡ್ಡ ಒತ್ತಾಸೆಯಾಗಿ ಪರಿಣಮಿಸಿತು.

ಅಮೆರಿಕ ದೇಶಕ್ಕೆ ಬರುವ ಮುನ್ನ ನಾನು ಸ್ವಾಮಿ ಶಿವಾನಂದರನ್ನು ಕೇಳಿದ ಒಂದು ಪ್ರಶ್ನೆಯೆಂದರೆ, "ಸ್ವಾಮಿಜಿ, ಪಶ್ಚಿಮ ದೇಶದ ಜನರು ಆಧ್ಯಾತ್ಮಿಕ ಉಪದೇಶವನ್ನು ಕೇಳಿದಾಗ ನಾನು ಅವರಿಗೆ ಏನು ಹೇಳಲಿ?" ಸ್ವಾಮಿಗಳು ಒಂದು ನಿಮಿಷ ಮೌನವಾಗಿದ್ದರು. ನಂತರ ಅವರು ಹೇಳಿದರು, "ನಾನು ಈಗ ನಿನಗೆ ಹೇಳುವುದಿಲ್ಲ. ಸ್ಯಾನ್ ಫ್ರಾನ್ಸಿಸ್ಕೋಗೆ ಹೋಗು. ಅಲ್ಲಿಯ ಜನರು ಯಾವ ವಿಷಯವನ್ನು ಕೇಳಲು ಉತ್ಸುಕರಾಗಿದ್ದಾರೆ ಎಂಬುದನ್ನು ಬರೆದು ತಿಳಿಸು. ಆಗ ನಾನು ನಿನಗೆ ಸಮರ್ಪಕವಾದ ಉಪದೇಶವನ್ನು ನೀಡುವೆ." ನಾನು ಈ ದೇಶಕ್ಕೆ ಬಂದ ಸ್ವಲ್ಪ ಕಾಲದ ನಂತರ ಅವರಿಗೆ ಈ ವಿಚಾರದ ಬಗ್ಗೆ ಬರೆಯಬೇಕಾಯಿತು. ನಾನು ಅಕ್ಟೋಬರ್ ೧೯೩೧ರಲ್ಲಿ ಬರೆದೆನೆಂದು ನನ್ನ ನೆನಪು. ಅದಕ್ಕೆ ದೀರ್ಘವಾದ ಉತ್ತರವೇ ಬಂದಿತು. ಬೇರೆ ಬೇರೆ ಆಧ್ಯಾತ್ಮಿಕ ಪ್ರವೃತ್ತಿಗಳನ್ನು ಹೊಂದಿರುವ ಜನರಿಗೆ ಎಂತಹ ಉಪದೇಶ ನೀಡಬೇಕೆಂಬುದನ್ನು ಅವರು ತಿಳಿಸಿದ್ದರು. ಅವರು ತಿಳಿಸಿದ ವಿಚಾರಗಳು ಎಲ್ಲ ಬಗೆಯ ಜನರಿಗೂ ಸಮಂಜಸವಾಗಿತ್ತು ಎಂದು ಮಾತ್ರ ಹೇಳುವೆ. ಅವರು ಈ ಮಾತುಗಳೊಂದಿಗೆ ಆ ಪತ್ರವನ್ನು ಮುಗಿಸಿದರು: "ಯಾರಿಗೇ ಆಗಲಿ, ನೀನು ಯಾವ ಉಪದೇಶವನ್ನು ಇತ್ತರೂ, ಅದರಿಂದ ಅವರಿಗೆ ಒಳ್ಳೆಯದಾಗುವುದು." ಅನಂತರ ಕೆಲವು ವಿಶೇಷ ವ್ಯಕ್ತಿಗಳ ಬಗ್ಗೆ ಅವರಿಗೆ ಬರೆದೆ. ಅವರು ಯಾವಾಗಲೂ ಕರುಣೆಯಿಂದ ಉತ್ತರವಿತ್ತು ಸಲಹಿದರು.

ಸ್ವಾಮಿ ಶಿವಾನಂದರು ಈ ವೇದಾಂತ ಸೊಸೈಟಿ ಮತ್ತು ಅದರ ಸದಸ್ಯರ ಮೇಲೆ ಇನ್ನೂ ಹೆಚ್ಚಿನ ಕೃಪೆಯನ್ನು ಹರಿಸಿದ್ದಾರೆ ಎಂಬುದನ್ನು ತಿಳಿದರೆ ನಿಮಗೆ ಸಂತೋಷವಾಗುವುದು. ಹೊಸ ದೇವಸ್ಥಾನವನ್ನು ಕಟ್ಟುವುದರ ಸಂಬಂಧವಾಗಿ ಅವರು ನನಗೆ ಬರೆದ ಮೂರು ತಿಂಗಳಲ್ಲೇ ಪಾರ್ಶ್ವವಾಯುವಿನಿಂದ ಅವರ ಬಲಭಾಗ ಮತ್ತು ಮಾತಿನ ಸಾಮರ್ಥ್ಯ ತೊಂದರೆಗೊಳಗಾದವು. ಅಕ್ಟೋಬರ್ ೧೯೩೩ರಲ್ಲಿ ಇಲ್ಲಿನ ಅನೇಕ ಸದಸ್ಯರು ಒಟ್ಟಾಗಿ ಅವರಿಗೆ ಒಂದು ಪತ್ರವನ್ನು ಬರೆದು ಅವರ ಬಗ್ಗೆ ತಮಗಿರುವ ಗೌರವಾದರಗಳನ್ನು ಸೂಚಿಸಿದ್ದಲ್ಲದೆ ಅವರು ಖಾಯಿಲೆಯಿಂದ ಶೀಘ್ರವಾಗಿ ಗುಣಮುಖರಾಗುವರೆಂಬ ಹೃತ್ಪೂರ್ವಕ ನಂಬಿಕೆಯನ್ನೂ ವ್ಯಕ್ತಪಡಿಸಿದರು. ಆದರೆ, ಸ್ವಾಮಿಗಳು ಇನ್ನು ಬರೆಯುವ ಸ್ಥಿತಿಯಲ್ಲಿರಲಿಲ್ಲ, ಅವರಿಂದ ಮಾತನಾಡಲೂ ಸಾಧ್ಯವಿರಲಿಲ್ಲ; ಆದರೆ ತಾವು ತಿಳಿಸಬೇಕಾದುದನ್ನು ಬಹಳ ಚೆನ್ನಾಗಿ ವ್ಯಕ್ತಪಡಿಸುತ್ತಿದ್ದರು. ಅವರ ಖಾಸಗಿ ಕಾರ್ಯದರ್ಶಿಗಳಾದ ಸ್ವಾಮಿ ಗಂಗೇಶಾನಂದರು, ಅವರ ಪರವಾಗಿ ಒಂದು ಉತ್ತರವನ್ನು ಬರೆದರು. ಅದರ ಒಂದು ಭಾಗವನ್ನು ಇಲ್ಲಿ ಕೊಡುತ್ತೇನೆ. ಅದನ್ನು ಆಗ ಸೊಸೈಟಿಯ ಅಧ್ಯಕ್ಷರಾಗಿದ್ದ ಮಿ. ಥಾಮಸ್ ಜೆ. ಆ್ಯಲನ್ ಅವರಿಗೆ ಬರೆಯಲಾಗಿತ್ತು:

**ನವೆಂಬರ್ ೨೫, ೧೯೩೩**

**ರಾಮಕೃಷ್ಣ ಮಠ**
**ಪೋಸ್ಟ್ ಬೇಲೂರು ಮಠ**
**ಹೌರಾ ಜಿಲ್ಲೆ, ಇಂಡಿಯಾ**

ಪ್ರಿಯ ಮಿ. ಆ್ಯಲನ್,

ಭಕ್ತಿ ಮತ್ತು ಸಹಾನುಭೂತಿಯಿಂದ ಕೂಡಿದ್ದ ನಿಮ್ಮ ಪತ್ರ ಸ್ವಾಮಿ ಶಿವಾನಂದರ ಹೃದಯವನ್ನು ಆಳವಾಗಿ ಸ್ಪರ್ಶಿಸಿತು. ಸಮುದ್ರದ ಆಚೆಯ ದಡದಲ್ಲಿ ವಾಸಿಸುತ್ತಿರುವ ಭಗವಂತನ ಮಕ್ಕಳಾದ ನಿಮಗೆಲ್ಲರಿಗೂ ಅವರ ದೈಹಿಕ ಅನಾರೋಗ್ಯ ಅಷ್ಟೊಂದು ಆತಂಕವನ್ನು ಉಂಟುಮಾಡಿತೆಂಬ ಆಲೋಚನೆ ಅವರ ಮನಸ್ಸನ್ನು ಆವರಿಸಿಬಿಟ್ಟಿತು. ಅವರಿಗೆ ಇನ್ನೂ ಮಾತನಾಡಲಾಗುತ್ತಿಲ್ಲ. ಆದರೂ ಸಂಜ್ಞೆಗಳ ಮೂಲಕ ಸಾಧ್ಯವಾಗುವಷ್ಟು ತಮ್ಮ ಮನಸ್ಸಿನಲ್ಲಿರುವುದನ್ನು ವ್ಯಕ್ತಪಡಿಸಿ ನಿಮಗೆ ಮತ್ತು ಸ್ಯಾನ್‌ಫ್ರಾನ್ಸಿಸ್ಕೊ, ಓಕ್‌ಲೆಂಡ್, ಬರ್ಕ್‌ಲಿ, ಬರ್ಲಿಂಗ್ಹಾಮ್ ಮುಂತಾದ ಕಡೆಗಳಲ್ಲಿರುವ ವೇದಾಂತದ ಇತರ ಅಭಿಮಾನಿಗಳನ್ನು ಅವರು ಹರಸಿದ್ದಾರೆ. ಪತ್ರದಲ್ಲಿ ನಿಮ್ಮೊಂದಿಗೆ ಸಹಿ ಹಾಕಿರುವ ಪ್ರತಿಯೊಬ್ಬರಿಗೂ ದಯವಿಟ್ಟು ಅವರ ಆಶೀರ್ವಾದಗಳನ್ನು ತಿಳಿಸುವುದು..

ಪೂಜ್ಯ ಸ್ವಾಮಿಜಿಯವರು ಚೆನ್ನಾಗಿದ್ದಾರೆ. ಈಗಿರುವ ದೈಹಿಕ ತೊಂದರೆಗಳ ಹೊರತಾಗಿ ಅವರ ಆರೋಗ್ಯ ಹದಗೆಡುವ ತೀವ್ರತೆಗೆ ತಿರುಗಿಲ್ಲವೆಂದು ಹೇಳಬಲ್ಲೆ. ಮುಕ್ತವಾಗಿರುವ ಆತ್ಮದ ತಿಳಿಯಾದ ಪ್ರಜ್ಞೆಯಿಂದ ಅವರು ಹರ್ಷಚಿತ್ತರಾಗಿದ್ದು ಆನಂದದಿಂದ ಇದ್ದಾರೆ.

ಭಗವಂತನಲ್ಲಿ ಎಂದಿಗೂ ನಿಮ್ಮವನಾದ

**–ಗಂಗೇಶಾನಂದ**

ಸ್ವಾಮಿ ಶಿವಾನಂದರ ಅಸೀಮ ಕರುಣೆ ಮತ್ತು ಕೃಪೆಗೆ ಸಂಬಂಧಪಟ್ಟ ಅನೇಕ ಘಟನೆಗಳನ್ನು ನಿಮಗೆ ಹೇಳಿದ್ದೇನೆ. ಅವುಗಳಲ್ಲಿ ಕೆಲವು ನನ್ನ ಜೀವನದ ಮೇಲೆ ಅಗಾಧವಾದ ಪರಿಣಾಮವನ್ನು ಉಂಟುಮಾಡಿವೆ. ಆದರೆ ಇನ್ನೂ ಇತರ ಘಟನೆಗಳಿವೆ, ಏಕೆಂದರೆ ನಾನು ನಿಮಗಾಗಲೇ ತಿಳಿಸಿದಂತೆ, ಅವರನ್ನು ಆಗಾಗ ನೋಡುತ್ತಿದ್ದೆ. ಉದಾಹರಣೆಗೆ, ಒಮ್ಮೆ ನನಗೆ ಖಾಯಿಲೆಯಾಗಿದ್ದಾಗ ಮಾಯಾವತಿಯಿಂದ ಕಲ್ಕತ್ತೆಗೆ ಬಂದೆ. ಕಲ್ಕತ್ತೆಯಲ್ಲಿ ಮೂರು ದಿನಗಳು ಉಳಿದುಕೊಂಡು ಸ್ವಲ್ಪಮಟ್ಟಿಗೆ ಚೇತರಿಸಿಕೊಂಡ ನಂತರ ಬೇಲೂರಿಗೆ ಹೋಗಿ ಅವರಿಗೆ ನನ್ನ ಪ್ರಣಾಮಗಳನ್ನು ಸಲ್ಲಿಸುವುದು ಎಂದು ಹಾಗೆ ಮಾಡಿದೆ. ಅದು ಒಳ್ಳೆಯ ನಡವಳಿಕೆಯೇ ಅಲ್ಲ: ನಾನು ಬಂದ ದಿನವೇ ಅವರನ್ನು ಹೋಗಿ ನೋಡಬೇಕಿತ್ತು. ಕಡೆಗೂ ನಾನು ಬೇಲೂರು ಮಠಕ್ಕೆ ಹೋದಾಗ ಅವರು ನನ್ನ ವರ್ತನೆಯ ಬಗ್ಗೆ ಸ್ವಲ್ಪವೂ ಅಸಂತೋಷವನ್ನಾಗಲಿ, ಅಸಮಾಧಾನವನ್ನಾಗಲಿ ತೋರಲಿಲ್ಲ; ಬದಲಿಗೆ ಎಂದಿನಂತೆ ನನ್ನ ಆರೋಗ್ಯದ ಬಗ್ಗೆ ಬಹಳ ಕಳವಳ ವ್ಯಕ್ತಪಡಿಸಿದರು. "ಚಿಂತಿಸಬೇಡ, ಇನ್ನು ಎರಡು ವಾರಗಳಲ್ಲಿ ನಿನ್ನ ಆರೋಗ್ಯ ಸುಧಾರಿಸುವುದು. ನೀನು ಚೇತರಿಸಿಕೊಳ್ಳುವೆ" ಎಂದರು. ನಿಜವಾಗಿ, ಎರಡು ವಾರಗಳಲ್ಲಿ ನಾನು ಗುಣಮುಖನಾದೆ. ಹೀಗೆ ಪ್ರತಿಯೊಂದು ಸಣ್ಣ ವಿಷಯಕ್ಕೂ ಅವರು ಸೂಕ್ಷ್ಮ ಗಮನ ಕೊಡುತ್ತಿದ್ದರು.

ಮತ್ತೊಮ್ಮೆ, ನಾನು ಭಾರತವನ್ನು ಬಿಟ್ಟು ಬರುವ ಕೆಲವು ದಿನಗಳ ಮುನ್ನ ಅವರು ಖುದ್ದಾಗಿ ನನಗೆ ಒಂದು ಔತಣವನ್ನು ಕೊಡಲು ಇಚ್ಛಿಸಿದ್ದರು. ನನಗೆ ಪ್ರಿಯವಾದ ಹಾಗೂ ಪಥ್ಯಕ್ಕೆ ಹೊಂದುವ ಆಹಾರ ಪದಾರ್ಥಗಳ ವ್ಯವಸ್ಥೆಮಾಡಿದ್ದರು. ಆ ಸಮಯದಲ್ಲಿ ನನ್ನ ಉದರಶೂಲೆ ಬಹಳ ತೊಂದರೆ ಕೊಡುತ್ತಿತ್ತು. ಅವರ ಈ ಏರ್ಪಾಟಿನ ಬಗ್ಗೆ ನನಗೆ ಯಾರೂ ತಿಳಿಸಿರಲಿಲ್ಲ. ಅದರ ಹಿಂದಿನ ಸಂಜೆ ಕಲ್ಕತ್ತೆಯ ಅದ್ವೈತಾಶ್ರಮದಲ್ಲಿ ನನಗಾಗಿ ಔಪಚಾರಿಕವಾದ ಒಂದು ಬೀಳ್ಕೊಡುಗೆಯ ಔತಣವಿತ್ತು. ಬೇರೆ ಬೇರೆ ಕೇಂದ್ರಗಳಿಂದ ಅನೇಕ ಸ್ವಾಮಿಗಳು ಬಂದಿದ್ದರು ಮತ್ತು ಭಾಷಣ ಮುಂತಾದವು ಇದ್ದವು, ಪುಷ್ಕಳವಾದ ಭೋಜನವೂ ಇತ್ತು. ಔತಣದಲ್ಲಿ ಬಡಿಸಿದ ಖಾದ್ಯಗಳನ್ನು ತೆಗೆದುಕೊಳ್ಳುವಾಗ ನಾನು ಸ್ವಲ್ಪವೂ ಎಚ್ಚರ ವಹಿಸಲಿಲ್ಲ. ಪರಿಣಾಮವಾಗಿ ಮಾರನೆಯ ದಿನ ನಾನು ಅಸ್ವಸ್ಥನಾದೆ. ಕಲ್ಕತ್ತೆಯಿಂದ ಫೋನ್ ಮಾಡಿ ಬೇಲೂರು ಮಠಕ್ಕೆ ಬರಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದೆ. ಆಗಷ್ಟೇ ನನಗೆ ಸ್ವಾಮಿ ಶಿವಾನಂದರು ಮಾಡಿದ್ದ ಏರ್ಪಾಟುಗಳ ಬಗ್ಗೆ ತಿಳಿಯಿತು. ಆದರೆ ಸಮಯ ಮೀರಿತ್ತು. ಅವರು ನನಗಾಗಿ ವಿಶೇಷ ಔತಣವನ್ನು ಏರ್ಪಡಿಸಿದ್ದು ನಾನು ಹೋಗಲು ಆಗಲಿಲ್ಲವಲ್ಲ ಎಂದು ಮನಸ್ಸಿಗೆ ಬಹಳ ಖೇದವಾಯಿತು. ಅದರ ಮರುದಿನದಂದು ಬಂದು ಅವರನ್ನು ಕಾಣುವುದಾಗಿ ತಿಳಿಸಿದೆ. ಮಾರನೆಯ ದಿನ ಅವರು ಮತ್ತೆ ಅದೇ ಬಗೆಯ ವಿಶೇಷ ಖಾದ್ಯಗಳನ್ನು ಅಡುಗೆ ಮಾಡಿಸಿ, ಕೆಲವು ಸಾಧುಗಳನ್ನು ಆಮಂತ್ರಿಸಿ, ನನಗಾಗಿ ಮತ್ತೆ ಔತಣವನ್ನು ಸಿದ್ಧಪಡಿಸಿದರು. ಎಷ್ಟೊಂದು ಸೌಜನ್ಯವಿತ್ತು ಅವರಲ್ಲಿ! ಅವರ ಕರುಣೆಗೆ ನಾನು ಪಾತ್ರನಲ್ಲವೆಂದು ನಾನು ಯಾವಾಗಲೂ ಭಾವಿಸಿದ್ದೇನೆ; ಆದರೂ, ಅವರ ಸ್ವಭಾವವೇ ಅಂತಹುದು. ನನ್ನಲ್ಲಿ ಯೋಗ್ಯತೆಯಿತ್ತೋ, ಇಲ್ಲವೋ, ಅವರು ಮಾತ್ರ ನನ್ನ ಪಾಲಿಗೆ ಅತ್ಯಂತ ಕೃಪಾಳುವಾಗಿದ್ದರು.

ಮೂರು ಜನ ಸ್ವಾಮಿಗಳಿಗೆ ನಾನು ಅನೇಕ ವಿಷಯಗಳಲ್ಲಿ ಋಣಿಯಾಗಿರುವೆ: ಒಬ್ಬರು ಸ್ವಾಮಿ ಬ್ರಹ್ಮಾನಂದರು, ಇನ್ನೊಬ್ಬರು ಸ್ವಾಮಿ ಪ್ರೇಮಾನಂದರು, ಮೂರನೆಯವರು ಸ್ವಾಮಿ ಶಿವಾನಂದರು. ಶ್ರೀರಾಮಕೃಷ್ಣರು, ಶ್ರೀಮಾತೆ, ಸ್ವಾಮಿಜಿ ಇವರೆಲ್ಲರೂ ನನ್ನ ಮೇಲೆ ವಿಶೇಷ ಕೃಪೆದೋರಿದ್ದಾರೆ ಎಂದಿಲ್ಲಿ ಹೇಳದಿದ್ದರೆ ತಪ್ಪಾಗುವುದು. ಆದರೆ ಅವರುಗಳ ಜೀವಿತಕಾಲದಲ್ಲಿ ಪರಿಚಯವಿದ್ದ ಸ್ವಾಮಿಗಳ ಪೈಕಿ ಈ ಮೂವರು ಅತ್ಯಂತ ಕರುಣಾಳುವಾಗಿದ್ದರು. ಅವರುಗಳಿಂದ ನಾನು ಪಡೆದಿರುವ ಆಶೀರ್ವಾದಗಳು ಯಥೇಷ್ಟವಾಗಿವೆ. ಕಾಲ ಕಳೆದಂತೆ, ಈಗ ಹಿಂತಿರುಗಿ ನೋಡಿದಾಗ ಆ ಹಿರಿಯ ಸ್ವಾಮಿಗಳು ಎಂತಹ ಅದ್ಭುತವಾದುದನ್ನು ಸಾಧಿಸಿದ್ದಾರೆ ಮತ್ತು ಅವರ ತಿಳಿವಳಿಕೆ ಎಷ್ಟು ಆಳವಾದುದು ಎಂಬುದು ತಿಳಿಯುವುದು. ಆ ಸಮಯದಲ್ಲಿ ಸರಿಯಾಗಿ ಅರ್ಥ ಮಾಡಿಕೊಳ್ಳಲು ಆಗಲಿಲ್ಲ, ಅದರ ಬಗ್ಗೆ ಸಮರ್ಪಕವಾದ ದೃಷ್ಟಿಯಿರಲಿಲ್ಲ. ಬಹು ಕಾಲದ ನಂತರವಷ್ಟೇ ಅವರ ಹರಕೆಯ ವ್ಯಾಪ್ತಿ ಮತ್ತು ಆಳ, ಅನುಭವಕ್ಕೆ ಬರುವುದು. ಈ ಅಪಾರ ಕರುಣೆ ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರೆಲ್ಲರ ಸಹಜಸ್ವಭಾವವಾಗಿತ್ತು ಮತ್ತು ಎಲ್ಲಾ ಶಾಖಾ ಕೇಂದ್ರಗಳಲ್ಲಿಯೂ ಇದು ವ್ಯಕ್ತವಾಗುತ್ತಿದೆ ಎಂಬ ವಿಶ್ವಾಸ ನನಗಿದೆ. ಶ್ರೀರಾಮಕೃಷ್ಣರನ್ನು ಮತ್ತು ಅವರ ಪ್ರತ್ಯಕ್ಷ ಶಿಷ್ಯರನ್ನು ಆಶೀರ್ವಾದ ಬಯಸಿ ಬಳಿ ಸಾರಿದರೆ, ಅವರ ಆಶೀರ್ವಾದವನ್ನು ನೀವು ಖಂಡಿತವಾಗಿ ಪಡೆಯುವಿರಿ. ಅದರ ಬಗ್ಗೆ ಯಾವ ಸಂದೇಹವೂ ಇಲ್ಲ.

**(ಮುಗಿಯಿತು)**